2017 ಕ.ತೀ.ವ. 314

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

## ಮೆಸರ್ಸ್ ಸೀಸರ್ಸ್ ರೆಸ್ಟೋರೆಂಟ್ ಮತ್ತು ಇನ್ನೊಬ್ಬರು -ವಿರುದ್ಧ- ಮೆಸರ್ಸ್ ಟಿ. ಶಿವರಾಂ ಹಾಗೂ ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಎದುರುದಾರರು ರಿಟ್ ಅರ್ಜಿದಾರರ ವಿರುದ್ಧ ಹೂಡಿದ ದಾವೆಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು, ಎರಡೂ ಪಕ್ಷದವರ ವಾದ ವಿವಾದಗಳನ್ನು ಆಲಿಸಿ, ದಾಖಲಾತಿಗಳನ್ನು ಪರಿಶೀಲಿಸಿ ರಿಟ್ ಅರ್ಜಿದಾರರು ದಾವಾ ಸ್ವತ್ತನ್ನು ಖಾಲಿ ಮಾಡಿ ಎದುರುದಾರ/ವಾದಿಯವರಿಗೆ ನೀಡಬೇಕೆಂದು ಮಧ್ಯಂತರ ಆದೇಶವನ್ನು ನೀಡಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ ಸಲ್ಲಿಕೆ.

ನ್ಯಾಯಾಲಯವು, ಮೊಹಮ್ಮದ್ ಮೊಹಿನುದ್ದೀನ್ ಅಲಿ -ವಿರುದ್ಧ- ಮಹೇಶ್ ಕುಮಾರ್ ಅಸಾಯಾ ಮತ್ತಿತರರು ಎಐಆರ್ 2004 ಎನ್‌ಓಸಿ 374 (ಎ.ಪಿ.) ಹಾಗೂ ಶ್ರೀಮತಿ ಶ್ಯಾಮಲಾ ಬಾಯಿ ಮತ್ತಿತರರು -ವಿರುದ್ಧ- ಶ್ರೀಮತಿ ಎಸ್. ಸರಸ್ವತಿ ಬಾಯಿ ಮತ್ತಿತರರು ಐಎಲ್‌ಆರ್ 1996 ಕೆಎಆರ್ 3091 ತೀರ್ಪುಗಳನ್ವಯ ಸಿವಿಲ್ ಪ್ರಕ್ರಿಯಾ ಸಂಹಿತೆ 12ನೇ ಕ್ರಮಾದೇಶದ 6ನೇ ನಿಯಮದಡಿಯಲ್ಲಿ ಮಾಡಿದ ಆದೇಶವು ಡಿಕ್ರಿ ಎನಿಸುತ್ತದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ವಜಾಗೊಳಿಸಿದೆ.

*ರಿಟ್ ಅರ್ಜಿ ಸಂಖ್ಯೆ: 29891–29892/2016 (ಜಿಎಂ–ಸಿಪಿಸಿ), ದಿನಾಂಕ: 21ನೇ ಜುಲೈ, 2016.

***ಉಲ್ಲೇಖಿಸಲಾದ ಮೊಕದ್ದಮೆಗಳು:*** **ಪ್ಯಾರಾದಲ್ಲಿ**

*1. ಐಎಲ್ಆರ್ 1996 ಕೆಎಆರ್ 3091*
*ಶ್ರೀಮತಿ ಶ್ಯಾಮಲಾಬಾಯಿ ಮತ್ತು ಇತರರು –ವಿರುದ್ಧ–*
*ಶ್ರೀಮತಿ ಎಸ್. ಸರಸ್ವತಿ ಬಾಯಿ ಮತ್ತು ಇತರರು (ಉಲ್ಲೇ) 7*

*2. ಎಐಆರ್ 2004 ಎನ್ಒಸಿ 374 (ಆಂಧ್ರಪ್ರದೇಶ)*
*ಮೊಹಮ್ಮದ್ ಮೊಹಿನುದ್ದೀನ್ ಅಲಿ –ವಿರುದ್ಧ–*
*ಮಹೇಶ್ ಕುಮಾರ್ ಅಸಾಯ ಮತ್ತು ಇನ್ನೊಬ್ಬರು (ಉಲ್ಲೇ) 7*

ಅರ್ಜಿದಾರರ ಪರ: ಶ್ರೀ ಲೋಕೇಶ್ ಆರ್. ಯಾದವ್, ವಕೀಲರು.
1 ರಿಂದ 3ರವರೆಗಿನ ಪ್ರತ್ಯರ್ಜಿದಾರರ ಪರ: ಶ್ರೀ ಟಿ. ಸೂರ್ಯನಾರಾಯಣ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್** :

ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ 12ನೇ ಕ್ರಮಾದೇಶದ 6ನೇ ನಿಯಮದಡಿ ಸಲ್ಲಿಸಲಾದ ವಾದಕಾಲೀನ ಅರ್ಜಿಯನ್ನು ಭಾಗಶಃ ಅನುಮತಿಸಿರುವ, ದಿನಾಂಕ 9.3.2016ರ ಆದೇಶದ ವಿರುದ್ಧ ಈ ರಿಟ್ ಅರ್ಜಿಗಳನ್ನು ನಿರ್ದೇಶಿಸಲಾಗಿದೆ.

2. ಅರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಲೋಕೇಶ್ ಆರ್. ಯಾದವ್ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರಾದ ಶ್ರೀ ಟಿ. ಸೂರ್ಯ ನಾರಾಯಣರವರ ವಾದಗಳನ್ನು ಆಲಿಸಲಾಗಿದೆ.

3. ದಾವೆಯ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನವನ್ನು ಬಿಟ್ಟು ಹೋಗಲು ಮತ್ತು ಸ್ವತ್ತಿನ ವರ್ಗಾವಣೆ ಮಾಡಲು ಹಾಗೂ 44,65,685/– ರೂ. ಮೊತ್ತವನ್ನು ಬಾಡಿಗೆಯ ಬಾಕಿಯಾಗಿ 1ನೇ ವಾದಿಗೆ ಪಾವತಿಸಲು ಅರ್ಜಿದಾರರಿಗೆ/ ಪ್ರತಿವಾದಿಗಳಿಗೆ ನಿರ್ದೇಶಿಸಿ, ತೀರ್ಪು ಮತ್ತು ಡಿಕ್ರಿಗಳಿಗೆ ಈ ಮುಂದಿನ ಕೋರಿಕೆಗಳೊಂದಿಗೆ ಸದ್ಯದ ಪ್ರಕರಣವನ್ನು ಪ್ರತ್ಯರ್ಜಿದಾರರು/ವಾದಿಗಳು ಸಲ್ಲಿಸಿರುತ್ತಾರೆ:

> *(ಎ) ದಾವೆಯ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನವನ್ನು 1ನೇ ವಾದಿಗೆ ಬಿಟ್ಟು ಹೋಗಲು ಮತ್ತು ಸ್ವತ್ತಿನ ವರ್ಗಾವಣೆ ಮಾಡಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು;*
>
> *(ಬಿ) ಗೇಣಿದಾರಿಕೆಯ ಮುಕ್ತಾಯದ ದಿನಾಂಕದವರೆಗೆ ಎಂದರೆ, ದಿನಾಂಕ 30.09.2014ರ ವರೆಗೆ ಗೇಣಿಯ ಬಾಕಿಯಾಗಿರುವ 44,65,685 ರೂ.ಗಳನ್ನು 1ನೇ ವಾದಿಗೆ ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು.*
>
> *(ಸಿ) ದಾವೆಯನ್ನು ಹೂಡುವ ದಿನಾಂಕದವರೆಗೆ ಎಂದರೆ, 25.11.2014ರ ವರೆಗೆ, ದಿನಾಂಕ 06.09.2014ರ, ಬಿಟ್ಟುಹೋಗಲು ನೀಡಿದ ನೋಟೀಸಿನಲ್ಲಿ ಬೇಡಿಕೆ ದಿನಾಂಕದಿಂದ ವಾರ್ಷಿಕ ಶೇಕಡಾ10ರ ದರದಲ್ಲಿ, 31.08.2014ರ ವರೆಗೆ ಪಾವತಿಸಬಹುದಾದ ಗೇಣಿಯ ಬಾಕಿಯಾದ 42,28,185/– ರೂ.ಗಳ ಮೇಲೆ 92,640/–ರೂ.ಗಳ ಬಡ್ಡಿಯನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು;*

*(ಡಿ) ಈ ಗೌರವಾನ್ವಿತ ನ್ಯಾಯಾಲಯವು ಸಮಂಜಸವೆಂದು ಭಾವಿಸುವಂಥ ದರದಲ್ಲಿ, ದಾವೆಯ ದಿನಾಂಕದಿಂದ ಡಿಕ್ರಿಯ ದಿನಾಂಕದವರೆಗೆ, 30.09.2014ರ ವರೆಗೆ ಗೇಣಿಯ ಬಾಕಿಯಾಗಿರುವ 44,65,685/– ರೂ.ಗಳ ಮೇಲೆ ಬಡ್ಡಿಯನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು;*

*(ಇ) ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಕೃತ ಬ್ಯಾಂಕುಗಳು ಹಣವನ್ನು ಸಾಲ ನೀಡಿದ ದರದಲ್ಲಿ, ಡಿಕ್ರಿಯ ದಿನಾಂಕದಿಂದ ಪ್ರತಿವಾದಿಗಳು ಪಾವತಿ ಮಾಡಿದ ದಿನಾಂಕದವರೆಗೆ, ದಿನಾಂಕ 30.09.2014ರ ವರೆಗಿನ ಗೇಣಿಯ ಬಾಕಿಯಾಗಿರುವ 44,65,685/– ರೂ.ಗಳ ಮೇಲೆ ಮುಂದಿನ ಬಡ್ಡಿಯುನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು;*

*(ಎಫ್) ದಿನಾಂಕ 1.10.2014ರಿಂದ ದಾವೆಯನ್ನು ಹೂಡುವ ದಿನಾಂಕದವರೆಗೆ ಹಿಂದಿನ ಮಧ್ಯಕಾಲೀನ ಲಾಭಗಳು ಮತ್ತು ಹಾನಿ ಪರಿಹಾರವಾಗಿರುವ, 3,37,500/– ರೂ.ಗಳ ಮೊತ್ತವನ್ನು 1ನೇ ವಾದಿಗೆ ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು;*

*(ಜಿ) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ XXನೇ ಕ್ರಮಾದೇಶದ 12ನೇ ನಿಯಮದಡಿ ವಿಚಾರಣೆಯನ್ನು ನಡೆಸುವ ಮೂಲಕ, ದಾವೆಯನ್ನು ಹೂಡಿದ ದಿನಾಂಕದಿಂದ ಸ್ವಾಧೀನವನ್ನು ವರ್ಗಾವಣೆ ಮಾಡುವ*

*ದಿನಾಂಕದವರೆಗೆ ಮುಂದಿನ ಮಧ್ಯಕಾಲೀನ ಲಾಭಗಳು ಮತ್ತು ಹಾನಿ ಪರಿಹಾರವನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು; ಹಾಗೂ*

*(ಎಚ್) ಈ ಗೌರವಾನ್ವಿತ ನ್ಯಾಯಾಲಯವು, ಮೊಕದ್ದಮೆಯ ಸಂದರ್ಭಗಳಲ್ಲಿ ಯೋಗ್ಯವೆಂದು ಭಾವಿಸಬಹುದಾದಂತೆ, ಅಂಥ ಇತರ ಅಥವಾ ಮುಂದಿನ ಪರಿಹಾರಗಳನ್ನು ನೀಡುವುದು".*

4. ಲಿಖಿತ ಹೇಳಿಕೆಯನ್ನು ದಾಖಲಿಸುವ ಮೂಲಕ ಅರ್ಜಿದಾರರು/ ಪ್ರತಿವಾದಿಗಳು ದಾವೆಯನ್ನು ವಿರೋಧಿಸಿರುತ್ತಾರೆ. ವಿವಾದಾಂಶಗಳನ್ನು ರೂಪಿಸುವುದಕ್ಕೆ ಮುಂಚೆ, ಲಿಖಿತ ಹೇಳಿಕೆಯಲ್ಲಿನ ಅಂಗೀಕಾರಗಳ ಆಧಾರದ ಮೇಲೆ, ಈ ಮುಂದಿನ ಕೋರಿಕೆಗಳೊಂದಿಗೆ ವಾದಿಗಳು ದಿನಾಂಕ 25.11.2014ರ 1ನೇ ವಾದಕಾಲೀನ ಅರ್ಜಿಯನ್ನು ಸಲ್ಲಿಸಿದ್ದಾರೆ:

*(ಎ) ದಾವೆಯ ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾಧೀನವನ್ನು 1ನೇ ವಾದಿಗೆ ಬಿಟ್ಟುಹೋಗಲು ಮತ್ತು ವರ್ಗಾವಣೆ ಮಾಡಲು ಪ್ರತಿವಾದಿಗಳಿಗೆ ನಿರ್ದೇಶಿಸುವುದು; ಹಾಗೂ*

*(ಬಿ) ದಿನಾಂಕ 31.8.2014ರ ವರೆಗೆ ಗೇಣಿಯು ಬಾಕಿಯಾಗಿರುವ 42,28,185/– ರೂ.ಮೊತ್ತವನ್ನು 1ನೇ ವಾದಿಗೆ ಪಾವತಿಸುವಂತೆ ಪ್ರತಿವಾದಿಗಳಿಗೆ ನಿರ್ದೇಶಿಸುವುದು.*

5. ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ ಮತ್ತು ದಾಖಲೆಯಲ್ಲಿನ ವಿಷಯ ಸಾಮಗ್ರಿಯನ್ನು ಪರಿಶೀಲಿಸಿದ ಮೇಲೆ, ಅಧಿವಿಚಾರಣಾ ನ್ಯಾಯಾಲಯವು, ದಾವೆಯ ಅನುಸೂಚಿತ ಸ್ವತ್ತನ್ನು ಬಿಟ್ಟುಹೋಗಲು ಮತ್ತು ವರ್ಗಾಯಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಬೇಕೆಂಬ ವಾದಿಗಳ 1ನೇ ಕೋರಿಕೆಯನ್ನು ಅನುಮತಿಸಿ, ಈ ರಿಟ್ ಅರ್ಜಿಗಳಲ್ಲಿ ಪ್ರಶ್ನಿತವಾದ ಆದೇಶವನ್ನು ಹೊರಡಿಸಿದೆ. ದಿನಾಂಕ 31.8.2014ರ ವರೆಗಿನ ಗೇಣಿಯ ಬಾಕಿಯಾಗಿ 42,28,185/– ರೂ.ಗಳನ್ನು ಪಾವತಿಸಲು ಪ್ರತಿವಾದಿಗಳಿಗೆ ನಿರ್ದೇಶಿಸುವಂತೆ ಕೋರಲಾಗಿದ್ದ, 2ನೇ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ಸದರಿ ಆದೇಶದ ದಿನಾಂಕದಿಂದ ಮೂರು ತಿಂಗಳುಗಳೊಳಗಾಗಿ ದಾವೆಯ ಅನುಸೂಚಿತ ಸ್ವತ್ತಿನ ಮತ್ತು ಶಾಂತಿಯುತವಾದ ಸ್ವಾಧೀನವನ್ನು ವರ್ಗಾಯಿಸಲು ಪ್ರತಿವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ.

6. ಪ್ರಶ್ನಿತ ಆದೇಶದ ಸರಿತನವನ್ನು ಖಂಡಿಸಿ, ಅರ್ಜಿದಾರರ ಪರ ಮಾನ್ಯ ವಕೀಲರು ಈ ಮುಂದಿನ ನಿವೇದನೆಗಳನ್ನು ಮಾಡಿರುತ್ತಾರೆ:

i) ಪ್ರಶ್ನಿತ ಆದೇಶವು ತೀರ್ಪಲ್ಲ ಮತ್ತು ಅದು ವಾದಕಾಲೀನ ಅರ್ಜಿಯ ಮೇಲೆ ಹೊರಡಿಸಿದ ಆದೇಶವಾಗಿದೆ ಹಾಗೂ ಆ ಕಾರಣದಿಂದ, ಡಿಕ್ರಿ ಪಡೆಯಲಾಗುವುದಿಲ್ಲ. ಡಿಕ್ರಿಯಿದ್ದ ಹೊರತು, ಪ್ರಶ್ನಿತ ಆದೇಶವನ್ನು ಕಾರ್ಯಗತಗೊಳಿಸಲಾಗುವುದಿಲ್ಲ.

ii) ಅಧಿವಿಚಾರಣಾ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸದೆ 1ನೇ ವಾದಕಾಲೀನ ಅರ್ಜಿಯ ಮೇಲೆ ಆದೇಶವನ್ನು ಹೊರಡಿಸಿದೆ ಮತ್ತು 1ನೇ ವಾದಕಾಲೀನ ಅರ್ಜಿಯನ್ನು ತರಾತುರಿಯಲ್ಲಿ ವಿಲೇ ಮಾಡಿದೆ;

iii) ಅರ್ಜಿದಾರರು/ಪ್ರತಿವಾದಿಗಳು ಸ್ಪಷ್ಟ ಅಂಗೀಕಾರಗಳನ್ನು ಮಾಡಿಲ್ಲ. ಆದುದರಿಂದ, ಪ್ರಶ್ನಿತ ಆದೇಶವು ಕಾನೂನಿನಲ್ಲಿ ಸಮರ್ಥನೀಯವಾಗಿಲ್ಲ.

7. ಇದಕ್ಕೆ ವಿರುದ್ಧವಾಗಿ, ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲ ಶ್ರೀ ಟಿ. ಸೂರ್ಯನಾರಾಯಣರವರು ***ಶ್ರೀಮತಿ ಶ್ಯಾಮಲಾಬಾಯಿ ಮತ್ತು ಇತರರು –ವಿರುದ್ಧ– ಶ್ರೀಮತಿ ಎಸ್. ಸರಸ್ವತಿ ಬಾಯಿ ಮತ್ತು ಇತರರು*** [1] ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪಿನ ಮೇಲೆ ಅವಲಂಬಿಸಿದ್ದು, ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿ ಸಲ್ಲಿಸಲಾದ ಈಗಿನ ರಿಟ್ ಅರ್ಜಿಗಳು ಸಮರ್ಥನೀಯವಾಗಿಲ್ಲವೆಂದು ವಾದಿಸಿದ್ದಾರೆ. ಅವರು ಸದರಿ ತೀರ್ಪಿನ 6 ಮತ್ತು 7ನೇ ಕಂಡಿಕೆಗಳನ್ನು ಕುರಿತು ಪ್ರಸ್ತಾಪಿಸುತ್ತಾ, ಅಧಿವಿಚಾರಣಾ ನ್ಯಾಯಾಲಯದಿಂದ ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಲಾದ ಯಾವುದೇ ಆದೇಶವು ಸಿವಿಲ್ ಪ್ರಕ್ರಿಯಾ ಸಂಹಿತೆಯ 2(2)ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ 'ಡಿಕ್ರಿ' ಯಾಗಿದೆಯೆಂದು ನಿವೇದಿಸಿರುತ್ತಾರೆ. ಅಷ್ಟೇ ಅಲ್ಲದೆ, ಅವರು ***ಮೊಹಮ್ಮದ್ ಮೊಹಿನುದ್ದೀನ್ ಅಲಿ –ವಿರುದ್ಧ– ಮಹೇಶ್ ಕುಮಾರ್ ಅಸಾಯ ಮತ್ತು ಇನ್ನೊಬ್ಬರು*** [2] ಪ್ರಕರಣದಲ್ಲಿನ ವಾದಾಂಶಗಳ ಟಿಪ್ಪಣಿಗಳ ಮೇಲೂ ಸಹ ಅವಲಂಬಿತರಾಗಿದ್ದಾರೆ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 12ನೇ ಕ್ರಮಾದೇಶದ 6ನೇ ನಿಯಮದಡಿ ಆದೇಶವನ್ನು ಪ್ರತಿವಾದಿಯ ವಿರುದ್ಧ ಹೊರಡಿಸಿದ್ದು, ಅವರು ಭಾರತ ಸಂವಿಧಾನದ 22ನೇ ಅನುಚ್ಛೇದದಡಿ ಉಚ್ಚ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಕೋರಲಾಗುವುದಿಲ್ಲವೆಂದು ವಾದಿಸಿದ್ದಾರೆ.

8. ನಾನು ಪಕ್ಷಕಾರರ ಪರ ಮಾನ್ಯ ವಕೀಲರ ನಿವೇದನೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ. ಮುಖ್ಯವಾದ ಕಾಗದಪತ್ರಗಳನ್ನು ಹಾಗೂ ಮೇಲೆ ಉಲ್ಲೇಖಿಸಿರುವ ತೀರ್ಪುಗಳನ್ನು ಸಹ ಅವಲೋಕಿಸಿದ್ದೇನೆ.

1. ಐಎಲ್ಆರ್ 1996 ಕೆಎಆರ್ 3091 2. ಎಐಆರ್ 2004 ಎನ್ಒಸಿ 374 (ಆಂಧ್ರಪ್ರದೇಶ)

9. ಮೇಲೆ ಹೇಳಿದ ***ಶ್ರೀಮತಿ ಶ್ಯಾಮಲಾಬಾಯಿ*** ಪ್ರಕರಣದಲ್ಲಿ, ಈ ನ್ಯಾಯಾಲಯವು, ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಲಾದ ಆದೇಶವು ಕೇವಲ ಮಧ್ಯಕಾಲೀನ ಆದೇಶವೇ? ಅಥವಾ ಡಿಕ್ರಿಯೇ? ಎಂಬುದಕ್ಕೆ ತನ್ನ ಪರಿಶೀಲನೆಗಾಗಿ ಪ್ರಶ್ನೆಯೊಂದನ್ನು ರೂಪಿಸಿದೆ ಮತ್ತು ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಲಾದ ಯಾವುದೇ ಆದೇಶವು, ಸಿಪಿಸಿ 2(2)ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಡಿಕ್ರಿಯಾಗಿದೆಯೆಂದು ತೀರ್ಮಾನಿಸಿದೆ. ಸದರಿ ಆದೇಶದ ಸಂಬಂಧಪಟ್ಟ ಭಾಗವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> *"6. ಆದುದರಿಂದ, ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಲಾದ ಅಧೀನ ನ್ಯಾಯಾಲಯದ ಪ್ರಶ್ನಿತ ಆದೇಶವೆಂದು ಕರೆಯಲಾಗಿರುವ ಇದು ಕೇವಲ ಮಧ್ಯಕಾಲೀನ ಆದೇಶವೇ? ಅಥವಾ ಡಿಕ್ರಿಯೇ? ಮತ್ತು ಇದಕ್ಕಾಗಿ ಸಿಪಿಸಿ 115ನೇ ಪ್ರಕರಣದಡಿ ಪುನರವಲೋಕನವು ಸಕ್ಷಮವಾದುದೆ? ಎಂಬುದು ನಿರ್ಧಾರಕ್ಕಾಗಿ ಕೋರಿರುವ ಮುಖ್ಯ ಪ್ರಶ್ನೆಯಾಗಿದೆ.*
>
> *7. ಮೇಲ್ಕಂಡ ಪ್ರಶ್ನೆಯೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸಲು ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದ ಉಪಬಂಧವನ್ನು ಪರಿಶೀಲಿಸುವುದು ಅಗತ್ಯವಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:*
>
> *"6. <u>ಅಂಗೀಕಾರದ ಮೇಲೆ ತೀರ್ಪು :–</u> (1) ವಾದದಲ್ಲಾಗಲೀ ಅಥವಾ ಬೇರೆ ರೀತಿಯಲ್ಲಾಗಲೀ; ಮೌಖಿಕವಾಗಿಯಾಗಲೀ ಲಿಖಿತದಲ್ಲಾಗಲೀ ಸಂಗತಿಗಳನ್ನು ಒಪ್ಪಿಕೊಂಡಿದ್ದಲ್ಲಿ, ದಾವೆಯ ಯಾವುದೇ ಹಂತದಲ್ಲಿ,*

*ನ್ಯಾಯಾಲಯವು ಯಾವುದೇ ಪಕ್ಷಕಾರರ ಅರ್ಜಿಯ ಮೇಲೆ ಅಥವಾ ತಂತಾನೇ ಹಾಗೂ ಪಕ್ಷಕಾರರ ನಡುವೆ ಯಾವುದೇ ಇತರ ಪ್ರಶ್ನೆಯ ನಿರ್ಧಾರಕ್ಕಾಗಿ ಕಾಯದೆ, ಅಂಥ ಅಂಗೀಕಾರಗಳಿಗೆ ಸಂಬಂಧಿಸಿದಂತೆ ಅದು ಯೋಗ್ಯವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಮಾಡಬಹುದು ಅಥವಾ ಅಂಥ ತೀರ್ಪನ್ನು ನೀಡಬಹುದು.*

*(2) ಉಪ-ನಿಯಮ(1)ರಡಿ, ತೀರ್ಪನ್ನು ಉಚ್ಚರಿಸಿದಾಗಲೆಲ್ಲಾ ತೀರ್ಪಿನ ಅನುಸಾರವಾಗಿ ಡಿಕ್ರಿಯನ್ನು ಪಡೆಯತಕ್ಕದ್ದು ಮತ್ತು ಡಿಕ್ರಿಯು ತೀರ್ಪನ್ನು ಉಚ್ಚರಿಸಿದ ದಿನಾಂಕವನ್ನು ಹೊಂದಿರತಕ್ಕದ್ದು".*

*'ಡಿಕ್ರಿ' ಎಂಬ ಪದವನ್ನು ಸಿ.ಪಿ.ಸಿ. (2)ನೇ ಪ್ರಕರಣದ (2)ನೇ ಉಪ-ಪ್ರಕರಣವು ಈ ಮುಂದಿನಂತೆ ಪರಿಭಾಷಿಸಿದೆ:*

*"ಡಿಕ್ರಿ" ಎಂದರೆ, ನ್ಯಾಯ ನಿರ್ಣಯದ ವಿಧ್ಯುಕ್ತವಾದ ಅಭಿವ್ಯಕ್ತಿಯಾಗಿದ್ದು, ಅದು ನ್ಯಾಯಾಲಯವು ವ್ಯಕ್ತಗೊಳಿಸುವುದಕ್ಕೆ ಸಂಬಂಧಿಸುವಷ್ಟರಮಟ್ಟಿಗೆ, ದಾವೆಯಲ್ಲಿ ವಿವಾದಾತ್ಮಕವಾದ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದ ಪಕ್ಷಕಾರರ ಹಕ್ಕುಗಳನ್ನು, ಪ್ರಾರಂಭಿಕವಾಗಿಯಾಗಲೀ ಅಥವಾ ಅಂತಿಮವಾಗಿಯಾಗಲೀ ನಿರ್ಣಾಯಕವಾಗಿ ನಿರ್ಧರಿಸುತ್ತದೆ. ಅದು ವಾದಪತ್ರದ ತಿರಸ್ಕರಣೆಯನ್ನು ಮತ್ತು 144ನೇ ಪ್ರಕರಣದ ವ್ಯಾಪ್ತಿಯಲ್ಲಿ ಯಾವುದೇ ಪ್ರಶ್ನೆಯ ನಿರ್ಧಾರವನ್ನು ಒಳಗೊಳ್ಳಬೇಕೆಂದು ಭಾವಿಸತಕ್ಕದ್ದು, ಆದರೆ ಅದರಲ್ಲಿ ಈ ಮುಂದಿನವುಗಳು ಒಳಗೊಂಡಿರತಕ್ಕದ್ದಲ್ಲ-*

*(ಎ) ಒಂದು ಆದೇಶದಿಂದ ಅಪೀಲು ಅಪೀಲಾಗಿಯೇ ಉಳಿಯುವ ಯಾವುದೇ ನ್ಯಾಯನಿರ್ಣಯ, ಅಥವಾ*

*(ಬಿ) ಕರ್ತವ್ಯ ಲೋಪಕ್ಕಾಗಿ ಯಾವುದೇ ವಜಾ ಮಾಡುವ ಆದೇಶ.*

***ವಿವರಣೆ:*** *ದಾವೆಯನ್ನು ಪೂರ್ಣವಾಗಿ ವಿಲೆ ಮಾಡುವ ಮುನ್ನ ಮುಂದಿನ ವ್ಯವಹರಣೆಗಳನ್ನು ಕೈಗೊಳ್ಳಬೇಕಾಗಿದ್ದಾಗ ಡಿಕ್ರಿಯು ಪ್ರಾರಂಭಿಕವಾಗಿರುತ್ತದೆ. ಅಂಥ ನ್ಯಾಯನಿರ್ಣಯವು ದಾವೆಯನ್ನು ಪೂರ್ಣವಾಗಿ ವಿಲೆ ಮಾಡುವಾಗ ಅದು ಅಂತಿಮವಾಗಿರುತ್ತದೆ. ಅದು ಭಾಗಶಃ ಪ್ರಾರಂಭಿಕವಾಗಿಯೂ ಮತ್ತು ಭಾಗಶಃ ಅಂತಿಮವಾಗಿಯೂ ಇರಬಹುದಾಗಿದೆ."*

'ಡಿಕ್ರಿ' ಎಂಬ ಪರಿಭಾಷೆಯಿಂದ, ಅದು ಪ್ರಾರಂಭಿಕ ವಾದದ್ದಾಗಿರಬಹುದು ಅಥವಾ ಅಂತಿಮ ವಾದದ್ದಾಗಿರಬಹುದು ಮತ್ತು ದಾವೆಯನ್ನು ಪೂರ್ಣವಾಗಿ ವಿಲೆಮಾಡುವುದಕ್ಕೆ ಮುಂಚೆ, ಮುಂದಿನ ವ್ಯವಹರಣೆಗಳನ್ನು ಕೈಗೊಳ್ಳಬೇಕಾಗಿದ್ದಾಗ ಡಿಕ್ರಿಯು ಪ್ರಾರಂಭಿಕವಾದದ್ದಾಗಿರುತ್ತದೆ ಎಂಬುದು ಸ್ಪಷ್ಟವಾಗಿದೆ. ಅಷ್ಟೇ ಅಲ್ಲದೆ, ದಾವೆಯಲ್ಲಿ ಅದರ ವ್ಯವಹರಣೆಯ ಯಾವುದೇ ಹಂತದಲ್ಲಿ ಯಾವುದೇ ಆದೇಶವನ್ನು ಜಾರಿ ಮಾಡಿದ್ದು, ಅದರಿಂದ ದಾವೆಯಲ್ಲಿ ವಿವಾದಾತ್ಮಕವಾದ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಪಕ್ಷಕಾರರ ಹಕ್ಕುಗಳು ನಿರ್ಣಾಯಕವಾಗಿ ನಿರ್ಧರಿಸಲ್ಪಡುತ್ತವೆಂಬುದು ಕಾನೂನಿನ ದೃಷ್ಟಿಯಲ್ಲಿ 'ಡಿಕ್ರಿ'ಗೆ ಸರಿಸಮವಾಗಿರತಕ್ಕದ್ದು ಎಂದು 'ಡಿಕ್ರಿಯ'

*ಪರಿಭಾಷೆಯಿಂದ ತಿಳಿದುಬಂದಿರುತ್ತದೆ. ಸದ್ಯದ ಪ್ರಕರಣದಲ್ಲಿ, ನಿರ್ವಿವಾದವಾಗಿ, ಪ್ರಶ್ನಿತ 'ಆದೇಶವು' ವಾದಿಯು ಹಾಗೂ ಆರ್.1 ರಿಂದ 4ರ ವರೆಗಿನ ಪ್ರತ್ಯರ್ಜಿದಾರರ ಹಕ್ಕುಗಳನ್ನು ವಿವಾದಾತ್ಮಕ ವಿಷಯದ ಸಂಬಂಧದಲ್ಲಿ ನಿರ್ಣಾಯಕವಾಗಿ ನಿರ್ಧರಿಸಿರುತ್ತದೆ ಹಾಗೂ ತದನುಸಾರವಾಗಿ, ಅಧೀನ ನ್ಯಾಯಾಲಯವು ಡಿಕ್ರಿ ಪಡೆದಿರುತ್ತದೆ.*

*ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದ ಓದಿನಿಂದ ಮತ್ತು ಸಿಪಿಸಿ 2(2)ನೇ ಪ್ರಕರಣದೊಂದಿಗೆ ಓದಲಾದ ಈ ಉಪಬಂಧದ ಸರಳ ಭಾಷೆಯಿಂದ, ದಾವೆಯ ಯಾವುದೇ ಹಂತದಲ್ಲಿ ಪ್ರತಿವಾದಿಯ ಒಪ್ಪಿಗೆಯ ಆಧಾರದ ಮೇಲೆ, ವಾದಿಯ ಕ್ಲೇಮನ್ನು ಭಾಗಶಃವಾಗಿ ಅಥವಾ ಪೂರ್ಣವಾಗಿ ಪುರಸ್ಕರಿಸಿ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಯಾವುದೇ ಆದೇಶವು 'ತೀರ್ಪು' ಆಗಿದ್ದು, ಅದನ್ನನುಸರಿಸಿ, ಪ್ರಾರಂಭಿಕವಾದ ಅಥವಾ ಅಂತಿಮವಾದ ಡಿಕ್ರಿ ಜಾರಿಗೊಳ್ಳಬೇಕು, ಮತ್ತು ಅದು ಪಕ್ಷಕಾರರ ಹಕ್ಕುಗಳು ಮತ್ತು ಬಾಧ್ಯತೆಗಳನ್ನು ನಿರ್ಧರಿಸುವ ವ್ಯವಹರಣೆಯಲ್ಲಿ ಹೊರಡಿಸಿದ ಕೇವಲ ಮಧ್ಯಕಾಲೀನ ಆದೇಶವಲ್ಲ ಎಂಬುದು ಸ್ಫಟಿಕದಷ್ಟು ಸ್ಪಷ್ಟವಾಗಿದೆ. ಆದುದರಿಂದ, ಅಧಿವಿಚಾರಣಾ ನ್ಯಾಯಾಲಯವು ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಿದ ಯಾವುದೇ ಆದೇಶವು ಸಿಪಿಸಿ 2(2)ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ 'ಡಿಕ್ರಿ'ಯಾಗಿರುತ್ತದೆ ಎಂಬ ಕಾನೂನು ನಿಲುವಿಗೆ ಸಂಬಂಧಿಸಿ, ಯಾವುದೇ ವಿವಾದವಿರಲು ಸಾಧ್ಯವಿಲ್ಲ.*

10. ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ತಮ್ಮ ನಿವೇದನೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಸರಿಯಾಗಿಯೇ ಇದೆ. ***ಶ್ರೀಮತಿ ಶ್ಯಾಮಲಾಬಾಯಿ*** ಪ್ರಕರಣದಲ್ಲಿ, ಹಾಗೆಯೇ ***ಮೊಹಮ್ಮದ್ ಮೊಹಿನುದ್ದೀನ್ ಅಲಿ*** ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿರುವ ತೀರ್ಪಿನ ಆಧಾರದ ಮೇಲೆ, ಸಿಪಿಸಿ 12ನೇ ಕ್ರಮಾದೇಶದ 6ನೇ ನಿಯಮದಡಿ ಹೊರಡಿಸಲಾದ ಪ್ರಶ್ನಿತ ಆದೇಶವು 'ಡಿಕ್ರಿ'ಯಾಗಿದೆ. ಆದುದರಿಂದ, ಈ ಅರ್ಜಿಗಳು ಸಮರ್ಥನೀಯವಾಗಿಲ್ಲ. ಈ ಕಾರಣದಿಂದ, ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಆಕ್ಷೇಪಿಸಲಾಗುವುದಿಲ್ಲ.

ಈ ರಿಟ್ ಅರ್ಜಿಗಳು ವಿಫಲವಾಗಿದ್ದು, ಅವುಗಳನ್ನು ವಜಾ ಮಾಡಲಾಗಿದೆ. ಯಾವುವೇ ವೆಚ್ಚಗಳಿಲ್ಲ.